**<u>ದಿನಾಂಕಃ 26-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ಶ್ರೀ. ಎಸ್ ಎನ್ ವಕೀಲರಿಂದಃ-</u>**

1. ಸರ್ವೇ ನಂ.107/2ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸರ್ವೇ ನಂ.107 ಎಷ್ಟು ಪೋಡುಗಳಾಗಿ ವಿಂಗಡಣೆ ಆಗಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯ ಚೆಕ್ಕುಬಂದಿ ಹೇಳುವಿರಾ ಎಂದರೆ ಸಾಕ್ಷಿ ಹೇಳುತ್ತೇನೆ ಎಂದು ನುಡಿದು ಪೂರ್ವಕ್ಕೆ ಮೆಡ್ಡೆಗೌಡರ ಮನೆ, ಪಶ್ಚಿಮಕ್ಕೆ ಡ್ರೈವರ್ ರಾಚಚಾರ್, ಉತ್ತರಕ್ಕೆ ಅರ್ಜುನ್ ರಾವ್, ದಕ್ಷಿಣಕ್ಕೆ ರಸ್ತೆ. ದಾವಾ ಸರ್ವೇ ನಂಬರ್ ಸ್ವತ್ತುಗಳು ಪ್ರಸ್ತುತ ಯಾರ ಯಾರ ಹೆಸರಿನಲ್ಲಿ ಖಾತೆ ಇದೆ ಎಂದು ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎಂದು ನುಡಿದು 5 ಜನರಿಗೆ ಎನ್ನುತ್ತಾರೆ. ಯಾವ ಆಧಾರದ ಮೇಲೆ ತಮ್ಮ ತಂದೆ ಹೆಸರಿಗೆ ಸರ್ವೇ ನಂ.107/2 ರಲ್ಲಿ ಖಾತೆ ಆಗಿದೆ ಎಂದರೆ ಸಾಕ್ಷಿ ಬಾಯಿ ಮಾತಿನಲ್ಲಿ ಮಾತನಾಡಿ ನನ್ನ ತಂದೆ ಖರೀದಿ ಮಾಡಿದ್ದಾರೆ ಎನ್ನುತ್ತಾರೆ.

2. ಸರ್ವೇ ನಂ.107/2 ರಲ್ಲಿ ತಮ್ಮ ತಂದೆ ಆಸ್ತಿ ಖರೀದಿ ಮಾಡಿರುತ್ತಾರೆ ಎಂದು ತಾವು ಹೇಳಿದ್ದು ಯಾರು ತಮ್ಮ ತಂದೆಗೆ ಮಾರಾಟ ಮಾಡಿದ್ದು ಎಂದರೆ ಸಾಕ್ಷಿ ಗೋರು ಬಾಯಿ ಎನ್ನುತ್ತಾರೆ. ಗೋರು ಬಾಯಿಯ ಗಂಡನ ಹೆಸರು ನಾರಾಯಣ ಎನ್ನುತ್ತಾರೆ. ಸರ್ವೇ ನಂ.107/2ರಲ್ಲಿ ಈಗಲೂ 20 ಗುಂಟೆ ವಿಸ್ತೀರ್ಣಕ್ಕೆ ನಾರಾಯಣ ರಾವ್ ಮುಳಿಕ್ ರವರ ಹೆಸರಿಗೆ ಖಾತೆ ಇದೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸರ್ವೇ ನಂ.107/2ರಲ್ಲಿ ಇರುವ ಮನೆಗಳೆಲ್ಲವೂ ನಾರಾಯಣ ರಾವ್ ಮುಳಿಕ್ ರವರ ಹೆಸರಿನಲ್ಲಿ ಇರುವ ಆಸ್ತಿಯಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಸರ್ವೇ ನಂ.107/6 ರಲ್ಲಿ ವಿಸ್ತೀರ್ಣ 1 ಎಕರೆ ಪ್ರತ್ಯೇಕ

ಪೋಡು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಾರಾಯಣ ರಾವ್ ಮುಳಿಕ್ ರವರು 2025ರಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ.

3. ನಾರಾಯಣ ರಾವ್ ಮುಳಿಕ್ ರವರು ತಮಗೆ ಸೇರಿದ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದೀರಾ ಎಂದು ಗ್ರಾಮದಲ್ಲಿ ಸಾಕಷ್ಟು ಬಾರಿ ಪಂಚಾಯಿತಿ ಮಾಡಿಸಿದ್ದರು ಎಂದರು ಸರಿ. ನಾರಾಯಣ ರಾವ್ ಮುಳಿಕ್ ರವರು ಸರ್ವೇ ನಂ.107/2ರಲ್ಲಿ 20 ಗುಂಟೆಯನ್ನು 1992ರಲ್ಲಿ ಖರೀದಿ ಮಾಡಿದ್ದು ಅಲ್ಲಿಂದ ಇಲ್ಲಿಯವರೆವಿಗೂ ಅವರು ಬದುಕಿರುವವರೆವಿಗೂ ಅಂದರೆ 2025ರ ವರೆಗೂ ಸ್ವಾಧೀನ ಇದ್ದರೂ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸ ನಂ.107/2ರಲ್ಲಿ 3 ಗುಂಟೆ ವಿಸ್ತೀರ್ಣದ ಆಸ್ತಿಯನ್ನು 1985ರಲ್ಲಿ ನಮ್ಮ ತಂದೆ ಖರೀದಿ ಮಾಡಿದ್ದರು ಎನ್ನುತ್ತಾರೆ. ಖರೀದಿ ಮಾಡಿರುವ ಬಗ್ಗೆ ಕ್ರಯ ಪತ್ರ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಕ್ರಯಪತ್ರ ಮಾಡಿಕೊಂಡಿಲ್ಲ ಬಾಯಿ ಮಾತಿನಲ್ಲಿ ಎನ್ನುತ್ತಾರೆ. ನಾನು ಹಾಜರುಪಡಿಸಿರುವ ದಾಖಲೆಗಳು ನಾರಾಯಣ್ ರಾವ್ ಮುಳಿಕ್ ರವರಿಗೆ ಸೇರಿದ ಆಸ್ತಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಿಗೂ ಮತ್ತು ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ